ದಿನಾಂಕಃ 25.08.2021 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಶ್ರೀ ಸಿಪಿ ವಕೀಲರಿಂದ.

ಸ ನಂ 111 ರ ಪೂರ್ವಕ್ಕೆ ಸ ನಂ 131, ಪಶ್ಚಿಮಕ್ಕೆ- 110, ಉತ್ತರಕ್ಕೆ -ಸ ನಂ 117 ಸರ್ಕಾರಿ ಸ್ವತ್ತು, ದಕ್ಷಿಣಕ್ಕೆ -ಸ ನಂ 117 ಸರ್ಕಾರಿ ಸ್ವತ್ತು ಬರುತ್ತದೆ. ಸ ನಂ 112 ರ ಪೂರ್ವಕ್ಕೆ -ಸ ನಂ - 113, ಪಶ್ಚಿಮಕ್ಕೆ - ಸ ನಂ 112 ಬೇರೆ ಅವರ ಸ್ವತ್ತು, ಉತ್ತರಕ್ಕೆ ಮತ್ತು ದ್ವಕ್ಷಿಣಕ್ಕೆ -ಸ ನಂ 117 ರ ಸರ್ಕಾರಿ ಸ್ವತ್ತು ಬರುತ್ತದೆ. ಸದರಿ ಸ ನಂಗಳ ಆರ್ ಟಿ ಸಿ ನನ್ನ ತಂದೆ ಹೆಸರಿನಲ್ಲಿ ಇದ್ದು ನನ್ನ ಹೆಸರಿನಲ್ಲಿ ಇರುವುದಿಲ್ಲ. ನಿಡಿ-1 ಮತ್ತು ನಿಡಿ-2 ನ್ನು ತಾಲ್ಲೂಕು ಕಛೇರಿಗೆ ಕೊಟ್ಟಿರುತ್ತೇನೆ.ಸದರಿ ದಾಖಲೆಗಳನ್ನು 2015 ರ ನಂತರ ಈ ದಾವೆಯನ್ನು ಸಲ್ಲಿಸಿದ ನಂತರ ಕೊಟ್ಟಿರುತ್ತ್ನೇನೆ. ದಿ.17-02-2021 ರಲ್ಲಿ ಸಲ್ಲಿಸಿರುತ್ತೇನೆ ಎಂದರೆ ಸರಿ . ನಿಡಿ-1 ಮತ್ತು 2 ರಲ್ಲಿ ಅರ್ಜಿಯ ದಿನಾಂಕಃ 23-03-2015 ಎಂದು ನಮೂದು ಇರುತ್ತದೆ ಎಂದರೆ ಸರಿ . ನಿಡಿ-7 ರಲ್ಲಿ ಸ ನಂ 111, 112, 113, 117 ಗಳನ್ನು ಗುರುತಿಸಬಹುದು.

ಸ ನಂ 117 ರ ಒಟ್ಟು ವಿಸ್ತೀರ್ಣ ನನಗೆ ಗೊತ್ತಿರುವುದಿಲ್ಲ. ಸ ನಂ 117 ಪ್ರಕಾರ ನಿಡಿ-6 ಪ್ರಕಾರ ಒಟ್ಟು ವಿಸ್ತೀರ್ಣ 148 ಎಕರೆ 11 ಗುಂಟೆ ಇರುತ್ತದೆ ಎಂದರೆ ಸ ರಿ .ಅದರ ಪ್ರಕಾರ 75 ಎಕರೆ 6 ಗುಂಟೆ ಕಾನು ಎಂದು , 12 ಎಕರೆ ಹೊಳೆಕೊಪ್ಪ ಮೈನರ್ ಫಾರೆಸ್ಟ್ , 61 ಎಕರೆ 5 ಗುಂಟೆ, ಸೊಪ್ಪಿ ನ ಬೆಟ್ಟ ಎಂದು ನಮೂದು ಇರುತ್ತದೆ. ನಿಡಿ-6 ರಲ್ಲಿ ನಮ್ಮ ನಮ್ಮ ತಂದೆ ಹಾಗೂ ಖಾಸಗೀ ವ್ಯಕ್ತಿಯ ಹೆಸರು ನಮೂದು ಇರುವುದಿಲ್ಲ. ಸ ನಂ 117 ಸಂಪೂರ್ಣವಾಗಿ ಸರ್ಕಾರದ ಸ್ವತ್ತು ಎಂದರೆ ಸರಿ . ಸ ನಂ 117 ರಲ್ಲಿ ಜಮೀನು ಇರುವ ಬಗ್ಗೆ ಸಾಗುವಳಿ ಚೀಟಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನ. ಸಾಕ್ಷಿಗೆ ನ್ಯಾಯಾಲಯದ ದಾಖಲೆಗಳನ್ನು ತೋರಿಸಲಾಗಿ ಅದರಲ್ಲಿ ಸಾಗುವಳಿ ಚೀಟಿ ಇಲ್ಲ ಎಂದು ನುಡಿದಿರುತ್ತಾರೆ. ಸ ನಂ 117 ರಲ್ಲಿ ನನಗೆ ಮಂಜೂರಾತಿ ಆಗಿರುವುದಿಲ್ಲ ಹಾಗೂ ಅದರ ಸ್ವಾಧೀನದಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ.

ದಿನಾಂಕಃ16-01-1982 ರಲ್ಲಿ ಸಿದ್ದಪ್ಪಗೌಡರಿಂದ ವಾದಿ ಸ ನಂ 115 ರಲ್ಲಿ 5 ಎಕರೆ 22 ಗುಂಟೆಯನ್ನು ಖರೀದಿ ಮಾಡಿರುವ ಬಗ್ಗೆ ನನಗೆ ಗೊತಿರುವುದಿಲ್ಲ.ವಾದಿಯು ಹಾಜರುಪಡಿಸಿದ ದಾಖಲೆ ಹಾಗೂ ಪ್ರಕರಣದ ಬಗ್ಗೆ ನಾನು ತಿಳಿದುಕೊಂಡಿರುವುದಿಲ್ಲ.ಪ್ರತಿವಾದ ಪತ್ರದಲ್ಲಿ ದಾಖಲೆಗಳು ಗೊತ್ತಿಲ್ಲದ ಕಾರಣ ದಾವಾ ಸ್ವತ್ತನ್ನು ವಾದಿ ಖರೀದಿಸಿರುವುದಿಲ್ಲ ಎಂದು ಹೇಳಿರುತ್ತೇನೆ. ದಾವಾ ಸ್ವತ್ತಿಗೆ ಸಂಬಂಧಿಸಿದ ದಾಖಲೆಗಳನ್ನು ನಾನು ನೋಡಿರುವುದಿಲ್ಲ. ದಾವಾ ಸ್ವತ್ತು ವಾದಿಯ ಮಾಲೀಕತ್ವ ಹಾಗೂ ಸ್ವಾಧೀನದಲ್ಲಿ ಇರಬಹುದು ಎಂದರೆ ಸಾಕ್ಷಿ ಇರಬಹುದು ಎಂದು ನುಡಿದಿರುತ್ತಾರೆ, ನಾನು ವಾದಿಯ ಸ್ವಾಧೀನದಲ್ಲಿ ಇರುವ ದಾವಾ ಸ್ವತಿಗೆ ಆತೀ ಕ್ರಮ ಪ್ರವೇಶ ಮಾಡಿ ಅವರಿಗೆ ತೊಂದರೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ನನಗೆ ಯಾವುದೇ ಹಕ್ಕು ಹಿತಾಸಕ್ತಿ ಸ್ವಾಧೀನ ಇರುವುದಿಲ್ಲ ಎಂದರೆ ಸರಿ . ಅದು ವಾದಿಗೆ ಸೇರಿದ ಸ್ವತ್ತು ಎಂದರೆ ನನಗೆ ಗೊತ್ತಿಲ್ಲ. ನಿಪಿ-1 ರ ಪ್ರಕಾರ ದಾವಾ ಸ್ವತ್ತು ವಾದಿಯ ಸ್ವಾಧೀನ ಮತ್ತು ಮಾಲೀಕತ್ವದಲ್ಲಿ ಇರುತ್ತದೆ ಎಂದು ನಮೂದು ಇರುತ್ತದೆ ಎಂದರೆ ಸರಿ .ನಿಪಿ-2 ವಾದಿಯು ದಾವಾ ಸ್ವತ್ತನ್ನು ಖರೀದಿಸಿದ ಕ್ರಯ ಪತ್ರ ಎಂದರೆ ಸಾಕ್ಷಿಯು ಇರಬಹುದು ಎಂದು ನುಡಿದಿರುತ್ತಾರೆ. ದಾವಾ ಸ್ವತ್ತಿಗೆ ಡಿಕ್ರಿ ಮಾಡುವುದರಿಂದ ತೊಂದರೆ ಆಗುವುದಿಲ್ಲ ಎಂದರೆ ಸರಿಯಲ್ಲ.ಸಾಕ್ಷಿಗೆ ಸ ನಂ 111 ಮತ್ತು 112 ರ ಟಿಪ್ಪಣಿ ಕಾಪಿ ದೃಡೀಕೃತ ನಕಲನ್ನು ನೋಡಿ ಒಪ್ಪಿದ್ದು ನಿಪಿ-11 ಮತ್ತು 12 ಎಂದು ಗುರುತಿಸಲಾಯಿತು.ಹೊಳೆಕೊಪ್ಪ ಗ್ರಾಮದಲ್ಲಿ ನನ್ನ ಹೆಸರಿಗೆ ಆರ್ ಟಿಸಿ, ಕಂದಾಯ ದಾಖಲೆ ಇರುವುದಿಲ್ಲ ಆದರೆ ನಮ್ಮ ತಂದೆ ಹೆಸರಿನಲ್ಲಿ ಇರುತ್ತವೆ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಂತೆ ನನ್ನ ಉತ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿಯಿದೆ.

ಎರಡನೇ ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು,